# ಪ್ರಕೃತಿ-ಪುರುಷ ಅಂದರೇನು?

❑ ಕೋ. ಚೆನ್ನಬಸಪ್ಪ

*ಖ್ಯಾತ ಸಾಹಿತಿಗಳಾದ ಶ್ರೀ ಕೋ.ಚೆನ್ನಬಸಪ್ಪ ಅವರು ತಮ್ಮ ಈ ಲೇಖನದಲ್ಲಿ ಜೀವಂತ ಭಗವಂತನ ಆರಾಧನೆಗೆ ಕರೆಕೊಟ್ಟಿದ್ದಾರೆ. ಕಾಯಕವೇ ಆ ಶ್ರೇಷ್ಠ ಆರಾಧನೆಯೆಂದು ಅವರು ಹೇಳುತ್ತಾರೆ.*

ಏಪ್ರಿಲ್ ೨೦೦೩ರಲ್ಲಿ ಆದಿಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃಗದ್ದಿಗೆ ಇರುವ ಸುಕ್ಷೇತ್ರ ಸುತ್ತೂರಿನಲ್ಲಿ ಕೆಲವು ದಿನಗಳ ಆಧ್ಯಾತ್ಮಿಕ ಶಿಬಿರ ಏರ್ಪಾಟಾಗಿತ್ತು. ಮುಂದೆ ಯಾವುದಾದರೂ ಪೀಠಕ್ಕೋ, ಮಠಕ್ಕೋ ಪೀಠಾಧಿಶ್ವರರೋ ಮಠಾಧಿಕಾರಿಗಳೋ ಆಗಲು ಅರ್ಹರನ್ನಾಗಿಸುವ ಜಿಜ್ಞಾಸುಗಳಿಗಾಗಿ ಆ ಶಿಬಿರವನ್ನು ಏರ್ಪಡಿಸಲಾಗಿತ್ತು. ಅಲ್ಲಿ ಧಾರ್ಮಿಕ ತತ್ತ್ವಶಾಸ್ತ್ರವನ್ನು ಕುರಿತು—ಷಡ್ದರ್ಶನ, ಉಪನಿಷತ್ತು, ವಚನ ಶಾಸ್ತ್ರ, ವೀರಶೈವ ಶಿವಯೋಗ, ಪ್ರಚಲಿತ ಭಾರತೀಯ ಧರ್ಮ ಶಾಸ್ತ್ರ ಇತ್ಯಾದಿಗಳನ್ನು ಕುರಿತು ಆ ಶಿಬಿರಾರ್ಥಿಗಳಿಗೆ ಒಂದೊಂದು ಘಂಟೆ ಒಬ್ಬೊಬ್ಬರಿಂದ ಉಪನ್ಯಾಸಗಳನ್ನು ಕೊಡುವ ಏರ್ಪಾಟಾಗಿತ್ತು. ಒಂದು ದಿನ ಅಲ್ಲಿ "ಶಿವಯೋಗ ಮತ್ತು ಶ್ರೀಅರವಿಂದರ ಪೂರ್ಣಯೋಗ"ವನ್ನು ಕುರಿತು ಮಾತನಾಡಲು ನನ್ನನ್ನು ಕರೆದಿದ್ದರು.

ಅಲ್ಲಿ ಸುಮಾರು ಇಪ್ಪತ್ತು ಶಿಬಿರಾರ್ಥಿಗಳಿದ್ದರು. ಎಂಟು ವರ್ಷದ ಬಾಲಕರಿಂದ ಇಪ್ಪತ್ತು-ಇಪ್ಪತ್ತೈದರವರೆಗಿನ ಯುವಕ ಜಿಜ್ಞಾಸುಗಳಿದ್ದರು. ಕಾರ್ಯಕ್ರಮ ಪ್ರಾರಂಭ ಆದೊಡನೆ ನಾನು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಒಂದೆರಡು ನಿಮಿಷ— ಕೇವಲ ಒಂದೆರಡು ನಿಮಿಷ—ಪ್ರಾಸ್ತಾವಿಕ ಮಾತನಾಡಿ ಅವರಲ್ಲಿ ಹಿರಿಯರಾಗಿದ್ದವರ ಕಡೆ ತಿರುಗಿ :

"ಮುಂದೆ ನೀವು ಪೀಠಾಧಿಪತಿಗಳೋ ಮಠಾಧಿಪತಿಗಳೋ ಆಗುವರಿದ್ದೀರಿ. ಯಾಕೆ ಈ ಆಧ್ಯಾತ್ಮಿಕ ಜೀವನದತ್ತ ತಿರುಗಿದಿರಿ?" ಎಂದು ಕೇಳಿದೆ.

"ಮೋಕ್ಷ ಸಾಧನೆಗಾಗಿ; ಮುಕ್ತಿಗಾಗಿ" ಎಂದರು ಒಬ್ಬರು.

"ಮೋಕ್ಷ, ಮುಕ್ತಿ ಎಂದರೇನು?" ಎಂದು ಮತ್ತೊಬ್ಬರ ಕಡೆ ತಿರುಗಿ ಕೇಳಿದೆ.

"ಇಹಲೋಕದ ದುಃಖ ದುಮ್ಮಾನ ಕ್ಲೇಶ ಸಂಸಾರದಿಂದ ಬಿಡುಗಡೆ ಹೊಂದಲು" ಎಂದು ಉತ್ತರಿಸಿದರು.

"ಶ್ರೀಅರವಿಂದಾಶ್ರಮಕ್ಕೆ ಬಂದಿದ್ದ ಒಬ್ಬ ಸಾಧಕರನ್ನು ಮಾತಾಜಿ 'ಇಲ್ಲಿಗೆ ಯಾಕೆ ಬಂದಿದ್ದೀರಿ?' ಎಂದು ಕೇಳಿದಾಗ, ಆ ಸಾಧಕರು ನೀವೀಗ ಹೇಳಿದ ಉತ್ತರವನ್ನೆ ಹೇಳಿದರಂತೆ. ಅದನ್ನು ಕೇಳಿದ ಮಾತಾಜಿ: 'ಹಾಗಾದರೆ ನೀವು ತಪ್ಪು ಸ್ಥಳಕ್ಕೆ ಬಂದಿದ್ದೀರಿ. ಇಲ್ಲಿ ನಿಮಗೆ ಎಡೆಯಿಲ್ಲ' ಎಂದರಂತೆ. ಅದೇ ಮಾತನ್ನು ನಾನಿಲ್ಲಿ ನಿಮಗೆ ನೆನಪು ಮಾಡಬೇಕಾಗಿದೆ. ಇಹಲೋಕದಿಂದ ತಪ್ಪಿಸಿಕೊಂಡು ಹೋಗುವುದು ನಿಮ್ಮ ಜೀವನೋದ್ದೇಶ ಆಗಿದ್ದರೆ ಆಧ್ಯಾತ್ಮಿಕ ಜೀವನ ಆಯ್ದುಕೊಳ್ಳಬೇಡಿ. ಜೀವನ ಜಂಜಾಟ, ಸಾಂಸಾರಿಕ ತಾಪತ್ರಯದಿಂದ ಪ್ರಾಪಂಚಿಕ ಸಂಪರ್ಕದಿಂದ ಬಿಡುಗಡೆಯಾಗಲು—ಇಹಲೋಕ ಪಲಾಯನಕ್ಕಾಗಿ ಈ ಸಂನ್ಯಾಸಿ ಜೀವನ ಮಾರ್ಗ ಹಿಡಿಯುವುದು ನಿಮ್ಮ ಉದ್ದೇಶವೇ?"

ಅವರೊಲ್ಲೊಬ್ಬರು : "ಎಲ್ಲ ಧರ್ಮಗಳೂ ಜಗದ ಜಂಜಡ, ದುಃಖನಿವಾರಣೆ ಜೀವನದ ಉದ್ದೇಶವಾಗಿರಬೇಕೆಂದು ಹೇಳುತ್ತವೆಯಲ್ಲ?"

ನಾನು ಅವರೊಡನೆ ಮಾತನಾಡುತ್ತಿದ್ದುದು ಸಂವಾದ ರೂಪದಲ್ಲಿ, ಉಪನ್ಯಾಸ ಪದ್ಧತಿಯಲ್ಲ. ಅವರು ಪ್ರಶ್ನೆ ಕೇಳಲೆಂಬುದು ನನ್ನ ಉದ್ದೇಶವಾಗಿತ್ತು. ಆ ಪ್ರಶ್ನೆಯನ್ನು ಎತ್ತಿಕೊಂಡು, "ಅಂದರೆ ಸುಖವೇ ಜೀವನದ ಉದ್ದೇಶ ಎಂದಂತಾಯ್ತು. ಆ ಸುಖ ಯಾವುದರಲ್ಲಿದೆ? ಈ ಇಹಲೋಕದಿಂದ ವಿಮುಖರಾಗಿ, ಪರಲೋಕಾಭಿಮುಖವಾಗಿ ಹೋಗುವುದರಲ್ಲಿ ಸುಖವಿದೆಯೇ? ಹಾಗಿದ್ದರೆ ಗುಹೆಯಲ್ಲಿ, ಅರಣ್ಯದಲ್ಲಿ ನಿರ್ಜನ ಪ್ರದೇಶದಲ್ಲಿ ವಾಸಿಸುವುದು, ಆದಷ್ಟು ಬೇಗನೆ ಇಹಲೋಕ ಯಾತ್ರೆ ಮುಗಿಸುವುದೇ ಜೀವನದ ಗುರಿಯೇ? ಸತ್ತಮೇಲೆ ಸ್ವರ್ಗಪ್ರಾಪ್ತಿ, ಮುಕ್ತಿ, ಮೋಕ್ಷ, ದೊರೆಯುವುದೆ ಆಗಿದ್ದರೆ ಜೀವನದ ಉದ್ದೇಶ ಆದಷ್ಟು ಬೇಗ ಸಾಯುವುದೆ ಎಂದಾಗುತ್ತದೆ. ಆದರೆ ವಚನಶಾಸ್ತ್ರ, ವೀರಶೈವ ಧರ್ಮ ಜೀವನದ ಉದ್ದೇಶ ಮರಣೋತ್ತರ ಸ್ವರ್ಗಪ್ರಾಪ್ತಿ ಎಂದು ಹೇಳುವುದಿಲ್ಲ. 'ಸ್ವರ್ಗಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ' ಎಂದು ಬಸವಣ್ಣನವರು ಹೇಳಿದ್ದಾರೆ. ಅದನ್ನೇ ಶ್ರೀಅರವಿಂದರೂ ಹೇಳುತ್ತಾರೆ : Heaven and earth are equal and one (ಸ್ವರ್ಗ ಮತ್ತು ಭೂಮಿ ಎರಡೂ ಸಮಾನ ಮತ್ತು ಒಂದೇ). ಈ ಯೋಗಸೂತ್ರವನ್ನು ಮಾತಾಜಿ '=1' ಎಂಬ ಗಣಿತ ಸಂಕೇತದಿಂದ ತೋರಿಸಿದ್ದಾರೆ. ಇಹಲೋಕ ಈ ಪ್ರಪಂಚದ ಅಪರಾರ್ಧ, ಆ ಸ್ವರ್ಗ ಎಂಬುದು ಪರಾರ್ಧ. ಅವೆರಡೂ ಒಂದೇ. ಎರಡೂ ಸಮ ಸಮ. ಅಂದಮೇಲೆ ಇಹಲೋಕದಿಂದ ಆಚೆ ಅತ್ತತ್ತ ಇನ್ನೆಲ್ಲಿಯೂ ಸ್ವರ್ಗವಿಲ್ಲ. ಇದೇ ಅದು; ಅದೇ ಇದು....

"ಅಂದರೆ ಇದು ಎಲ್ಲಿಗೆ ಬಂತು? 'ಇದೇ ಸ್ವರ್ಗವಾಗಬೇಕು.' ಆ ಸ್ವರ್ಗದ ಲಕ್ಷಣವೇನು? ಅಲ್ಲಿ ದುಃಖನಿವಾರಣೆ ಆಗಿ, ಸುಖಪ್ರಾಪ್ತಿ ಆಗುವುದೆ? ಇದೇ ಅದು ಎಂದಮೇಲೆ ಇಲ್ಲಿಂದ ನುಣುಚಿಕೊಂಡು ಪಲಾಯನ ಮಾಡುವುದು ಜೀವನದ ಗುರಿಯಲ್ಲ. ಇಲ್ಲಿದ್ದೇ ಆ ಸುಖವನ್ನು—ಆ ಸುಖದ ಮೂಲವಾದ ಆನಂದಸಾಗರವನ್ನು—ಪಡೆಯುವುದೇ ಜೀವನದ ಉದ್ದೇಶ

ಎಂಬುದಾಗಿ ಉಪನಿಷತ್ತುಗಳೂ ಸರ್ವದರ್ಶನಗಳೂ ಶಿವಯೋಗವೂ ಶ್ರೀಅರವಿಂದರ ಪೂರ್ಣಯೋಗವೂ ಹೇಳುತ್ತವೆ. ಆ ಸಂತೋಷ, ಆ ಆನಂದವನ್ನು ಪಡೆಯುವುದು ಹೇಗೆ? ಅನ್ನ ನೀರು ಬಿಟ್ಟು, ಬಟ್ಟೆ ಬರೆ ಬಿಟ್ಟು, ದಟ್ಟದರಿದ್ರರಾಗಿ ಏಕಾಂಗಿ ಯಾಗಿ ಗಿರಿಗಹ್ವರದಲ್ಲಿ ಕುಳಿತು, ಕಣ್ಮುಚ್ಚಿ ಮೂಗುಮುಚ್ಚಿ ಕುಳಿತು ಪರಧ್ಯಾನದಲ್ಲಿ ಜೀವನ ಮುಗಿಸುವುದರಲ್ಲಿ, ಆ ಆನಂದಾಬ್ಧಿಯಲ್ಲಿ ಮುಳುಗುವುದರಲ್ಲಿ ಇದೆಯೇ?"

ಹೀಗೆ ಮಾತು ಮುಂದುವರಿಸಿದೆ. ಆಗ ಒಬ್ಬ ಶಿಬಿರಾರ್ಥಿ ಕೇಳಿದರು: "ದೈವಸಾಕ್ಷಾತ್ಕಾರವೇ ಯೋಗದ ಗುರಿ, ಸಾಧನೆಯ ಗಮ್ಯ ಎಂದು ಹೇಳಿದೆಯಲ್ಲ? ದೈವಸಾಕ್ಷಾತ್ಕಾರವಾಗಲು ಸಾಧನೆ ಮಾಡಬೇಕಲ್ಲವೆ?"

"ನಿಮ್ಮ ಪ್ರಶ್ನೆಯಲ್ಲಿ ಎರಡು ಮುಖ್ಯ ಶಬ್ದಗಳಿವೆ. ಒಂದು ದೈವ ಇನ್ನೊಂದು ಸಾಧನೆ. ದೈವ ಎಂದರೇನು? ಅದರ ಲಕ್ಷಣ ವೇನು? ಅದನ್ನು ಪಡೆಯಬೇಕಾದರೆ ಹೇಗೆ ಸಾಧನೆ ಮಾಡಬೇಕು?"

"ಅದನ್ನು—ದೈವವನ್ನು– ಹೀಗೆಯೇ ಅಂತ ಹೇಳಲು ಬಾರದು. ಅದು ಮಾತಿಗೆ ನಿಲುಕದು. ಮನಸ್ಸಿಗೂ ಅತೀತ."

"ಹಾಗಾದರೆ ಅದು ಇದೆ ಎಂಬುದಾದರೂ ಹೇಗೆ?"

"ಅದು ಅಜ್ಞೇಯ" ಎಂದರು ಇನ್ನೊಬ್ಬ ಶಿಬಿರಾರ್ಥಿ.

"ಅನುಭವದಿಂದ ಅದು ಇದೆ ಎಂದು ತಿಳಿಯಬಹುದು" ಎಂದರು ಇನ್ನೊಬ್ಬರು.

"ಆ ಅನುಭವ ಹೇಗೆ ಉಂಟಾಗುತ್ತದೆ? ಏನು ಮಾಡಿದರೆ ಅದರ ಜ್ಞಾನಪ್ರಾಪ್ತಿ ಆಗುತ್ತದೆ? ಅದು ಎಲ್ಲೆಲ್ಲಿಯೂ, ಅಣು ರೇಣು ತೃಣಕಾಷ್ಠದಿಂದ ಹಿಡಿದು, ಮಹತೋ ಮಹೀಯದವರೆಗೆ ವಿಶ್ವ ಬ್ರಹ್ಮಾಂಡದಲ್ಲೆಲ್ಲ ಅದೇ ಇದೆಯಂತೆ. ಅದು ಸರ್ವಾಂತರ್ಯಾಮಿ ಎಂದು ಆಧ್ಯಾತ್ಮಿಕ ತತ್ತ್ವಶಾಸ್ತ್ರ ಹೇಳುತ್ತದೆ. ಆಗಿರುವುದೆಲ್ಲ ಅದರಿಂದಲೇ ಆಗಿದೆ ಎಂದು ತತ್ತ್ವಶಾಸ್ತ್ರ ಸಾರುತ್ತದೆ. ಗೀತೆಯಲ್ಲಿ 'ವಿಶ್ವರೂಪದರ್ಶನಯೋಗ'ದಲ್ಲಿ ಭಗವಾನ್ ಕೃಷ್ಣ ಪ್ರತ್ಯಕ್ಷ ತೋರಿಸುತ್ತಾನೆ. ಅದನ್ನೇ ಶರಣರು : 'ತಿರೆಯ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ, ನನೆಯೊಳಗಣ ಪರಿಮಳದಂತೆ ಇದ್ದಿತ್ತು' ಎಂದಿದ್ದಾರೆ. 'ತರುವೆಲ್ಲಾ ನೀನೆ, ಖಗಮೃಗಗಳೆಲ್ಲ ನೀನೆ' ಎಂದು ಶರಣರು ಹೇಳುತ್ತಾರೆ. ಅಂದಮೇಲೆ ಇದು ಇಲ್ಲಿಯೆ ನಿಮ್ಮ ಕಣ್ಣೆದುರಿನಲ್ಲಿಯೆ ಪ್ರತ್ಯಕ್ಷವಾಗಿ, ಈ ಗಿಡ, ಮರ, ಬಳ್ಳಿ, ಪುಷ್ಪ, ಸಕಲಸೃಷ್ಟಿಯ ಮಣಿಮುಕುಟವಾದ ಮಾನವನಲ್ಲಿ—ಅಲ್ಲಿ ಇಲ್ಲಿ ಎಲ್ಲಿ ಎಂದು ಕೇಳಲೇಬೇಡಿ—ಕಣ್ಣು ಹೊರಳಿಸಿದಲ್ಲೆಲ್ಲ ಅದು ಪ್ರತ್ಯಕ್ಷ ಇದೆ. ಕಣ್ಣಿಗೆ ಕಾಣುತ್ತದೆ" ಎಂದು ಹೇಳಿ ಕಿಟಕಿಯ ಹೊರಗೆ ನೋಡುತ್ತಾ "ಅಲ್ಲಿ ಕಾಣುವ ಆ ಸುಂದರವಾದ ಬಣ್ಣ ಬಣ್ಣದ ಹೂವಿನಲ್ಲಿಯೂ ಆ ದೈವ ಕಣ್ಣಿಗೆ ಪ್ರತ್ಯಕ್ಷ ಕಾಣುತ್ತಿದೆ. ಆ ಹೂವು ಹೇಗೆ ಬಂತು?" ಎಂದು ಎಂಟು ಹತ್ತು ವರ್ಷದ ಶಿಬಿರಾರ್ಥಿಗಳ ಕಡೆ ತಿರುಗಿ ಪ್ರಶ್ನಿಸಿದೆ.

ಆ ಬಾಲಕ ಶಿಬಿರಾರ್ಥಿ : "ಹೂವಿನ ಗಿಡದಿಂದ."

"ಗಿಡ ಹೇಗೆ ಹುಟ್ಟಿತು?"

"ಬೀಜದಿಂದ ಹುಟ್ಟಿತು."

"ಆ ಬೀಜದಲ್ಲಿ ಗಿಡವಾಗಲಿ, ಹೂವಾಗಲಿ ಕಾಣುವುದಿಲ್ಲ ವಲ್ಲ! ಆ ಬೀಜ ನೋಟಕ್ಕೆ ನಿರ್ಜೀವ ವಸ್ತು. ಆದರೆ ಗಿಡದಲ್ಲೂ ಜೀವ ಇದೆ ಎಂದು ಜಗದೀಶಚಂದ್ರ ಬೋಸರು ವಿಜ್ಞಾನ ಲೋಕಕ್ಕೆ ಪ್ರತ್ಯಕ್ಷ ಪ್ರಯೋಗಮಾಡಿ ತೋರಿಸಿದರು. ಅದನ್ನು ವಿಜ್ಞಾನಲೋಕ ಸಂಪೂರ್ಣವಾಗಿ ಒಪ್ಪಿಕೊಂಡಿದೆ. ನಿರ್ಜೀವ ದಂತಿರುವ ಬೀಜದಿಂದ ಈ ಸಜೀವ ಗಿಡಮರ ಬಳ್ಳಿ, ಈ ವೈವಿಧ್ಯ ಮಯವಾದ ಬಣ್ಣಬಣ್ಣದ ಹೂವುಗಳು ಅರಳಿವೆ ಎಂಬುದು ಸರ್ವಮಾನ್ಯ ವೈಜ್ಞಾನಿಕ ಸತ್ಯ. ಅದನ್ನೆ ಶರಣರು ಶಿವಯೋಗ ದಲ್ಲಿ, ವಚನಶಾಸ್ತ್ರದಲ್ಲಿ ಸಾರಿದ್ದಾರೆ. ಅಷ್ಟೇಕೆ, ತೊಲೆ, ಕಂಬ ಗಳಿಲ್ಲದೆ ಈ ಭೂಮಿ ಆಕಾಶದೇಶದಲ್ಲಿ ನಿಂತಿದೆಯಲ್ಲ—ನಿಂತಿ ದ್ದರೂ ಅಗಣಿತ ವೇಗದಿಂದ ತಿರುಗುತ್ತಿದೆಯಲ್ಲ—ಅದೆಲ್ಲವೂ ಯಾವುದೋ ಒಂದು ಶಕ್ತಿಯಿಂದ. ಬೀಜದಲ್ಲಿರುವ ಮೊಳೆಯುವ ಶಕ್ತಿ ಏನಿದೆಯೊ, ಅದೇ ಶಕ್ತಿ ಈ ಸೌರವ್ಯೂಹವನ್ನು ಹಿಡಿದಿದೆ. ಅದನ್ನೇ ಶ್ರೀಅರವಿಂದರು ಪೂರ್ಣಯೋಗದಲ್ಲಿ ಪ್ರತಿಪಾದಿಸು ತ್ತಾರೆ. 'ಯಾವುದು ಸಂವೃತ್ತವಾಗಿದೆಯೊ ಅದೇ ವಿಕಾಸವಾಗಿದೆ' ಎನ್ನುತ್ತಾರೆ. ಆ ಬೀಜದಲ್ಲಿ ಈ ಹೂವು ಗುಪ್ತವಾಗಿ ಅಡಗಿತ್ತು. ಅದು ವಿಕಾಸವಾಗಿ ಹೂವಾಗಿ ಅರಳಿದೆ. ಅದು ಹೇಗಾಯಿತು?" ಎಂದು ನಾನು ಪ್ರಶ್ನಾರ್ಥಕ ದೃಷ್ಟಿಬೀರಿ ಮಾತು ನಿಲ್ಲಿಸಿದೆ.

"ಅದು ಪ್ರಕೃತಿ ನಿಯಮ" ಎಂದೊಬ್ಬ ಶಿಬಿರಾರ್ಥಿ ಹೇಳಿ ದರು.

"ಪ್ರಕೃತಿ ಎಂದರೇನು?" ಎಂದು ಮತ್ತೆ ಕೇಳಿದೆ. ಅವರು ಯೋಚಿಸುವಂತೆ ಸುಮ್ಮನಿದ್ದರು.

ಮತ್ತೆ ನಾನು : "ಪ್ರಕೃತಿ ಎಂದರೇನು? ಬೀಜದಲ್ಲಿದ್ದ ಯಾವುದೊ ಒಂದು ಮೊಳೆಯುವ ಶಕ್ತಿಯಿಂದ ಅದು ಗಿಡವಾಗಿ, ಹೂವಾಗಿ, ಫಲವಾಗಿ ಪರಿಣಾಮ ಹೊಂದುತ್ತದೆ. ಅದನ್ನು 'ಪ್ರಕೃತಿ ಪರಿಣಾಮ' ಎಂದು ತಾತ್ತ್ವಿಕ ಪರಿಭಾಷೆಯಲ್ಲಿ ಕರೆದಿದ್ದಾರೆ. 'ಮೊಳಕೆ'ಯಾಗುವಂತೆ ಮಾಡುವ 'ಶಕ್ತಿ'ಯೆ ಪ್ರಕೃತಿ. ಆ 'ಪ್ರಕೃತಿ' ಸೃಷ್ಟಿ ಮಾಡುತ್ತದೆ, ನಿಸರ್ಗವಾಗುತ್ತದೆ, ಜೀವ, ಜಗತ್ತು, ವಿಶ್ವವೇ ಆಗುತ್ತದೆ.

"ಹಾಗಾದರೆ ಆ ಶಕ್ತಿ ಬೀಜದೊಳಗೆ ಹೇಗೆ ಬಂತು? ಯಾವಾಗ ಬಂತು? ಬೀಜ ಮೊದಲೊ? ಗಿಡಮರ ಮೊದಲೊ? ಎಂಬುದು ಬಿಡಿಸಲಾಗದ ಒಗಟಾಗಿದೆ. ಬೀಜವಿಲ್ಲದೆ ಹೋಗಿ ದ್ದರೆ ಗಿಡಮರ ಹುಟ್ಟುತ್ತಿರಲಿಲ್ಲ. ಮರಗಿಡ ಹೂ ಬಿಟ್ಟು ಫಲ ಕೊಡದಿದ್ದರೆ ಬೀಜ ಇರುತ್ತಿರಲಿಲ್ಲ. ಯಾವುದು ಮೊದಲು? ಈ ಮಾತು ದೈವಕ್ಕೂ ಅನ್ವಯಿಸುತ್ತದೆ. ಅದಕ್ಕೆ ಆದಿ ಎಂಬುದೂ ಇಲ್ಲ, ಅಂತ್ಯ ಎಂಬುದೂ ಇಲ್ಲ. ಅದು ಕಾಲಾತೀತ. ಇಂಥ

ದಿಸವೇ, ಈ ಮುಹೂರ್ತದಲ್ಲೆ ಬಂತೆಂಬುದು ಹೇಳಲುಬಾರದು. ಭಗವಾನ್ ಕೃಷ್ಣ, **ಅಹಂ ಕಾಲೋಽಸ್ಮಿ** ಎಂದು ಗೀತೆಯಲ್ಲಿ ಹೇಳಿವಾಗ ಈ ಬೀಜವೃಕ್ಷನ್ಯಾಯವನ್ನೇ ಸಾರಿದ್ದಾನೆ. ಅದನ್ನೇ ಅಲ್ಲಮಪ್ರಭುಗಳೂ ತಮ್ಮ ವಚನದಲ್ಲಿ 'ನಾನು ನೀನು ಇಲ್ಲ ದಂದು—ನೀನು ಹುಟ್ಟುವ ಮೊದಲು..' ಇತ್ಯಾದಿ ವಚನಗಳಲ್ಲಿ ಸಾರಿದ್ದಾರೆ. ಹೀಗೆ ಆದಿ ಅನಾದಿ ಇಲ್ಲದ ಆ ದೈವಶಕ್ತಿಯನ್ನು ಯಾರು ಅರಿಯುತ್ತಾರೊ, ಅನುಭವಿಸುತ್ತಾರೊ, ಅವರೇ ದೈವ ದರ್ಶನ ಮಾಡಿಕೊಂಡವರು. **ಬೀಜದ ಹೊರಮೈ ಪುರುಷ, ಬೀಜದ ಒಳಗಿರುವ ಮೊಳೆಯುವ ಶಕ್ತಿ ಪ್ರಕೃತಿ. ಪುರುಷ ನಿಲ್ಲದೆ ಪ್ರಕೃತಿಗೆ ಎಡೆಯಿಲ್ಲ. ಪ್ರಕೃತಿಯಿಲ್ಲದೆ ಪುರುಷ ನಿಷ್ಕ್ರಿಯ.**"

ನನ್ನ ಮಾತನ್ನು ಮುಂದುವರಿಸುತ್ತಾ, "ಈಗ ನಿಮಗೆ ಸ್ಥೂಲ ವಾಗಿ 'ದೈವ' ಎಂದರೆ ಏನೆಂಬುದರ ಕಲ್ಪನೆ ಆಗಿರಬಹುದು. ಅದನ್ನು ಸಾಕ್ಷಾತ್ಕರಿಸಿಕೊಳ್ಳುವುದು ಎಂದರೆ ಏನು? ಸಾಕ್ಷಾತ್ ಎಂಬುದರ ಅರ್ಥ—ಕಣ್‌ಮುಂದೆ, ಕಣ್ಣೆದುರಿಗೆ. ಸಾಕ್ಷಾತ್ಕಾರ ಎಂದರೆ ಕಣ್ಣಿಂದ ಇಲ್ಲವೆ ಮನದಿಂದ ಗ್ರಹಿಸುವುದು, ಕಾಣುವುದು. ಸಾಕ್ಷಿ ಎಂದರೆ ಕಣ್ಣಿಂದ ಇಲ್ಲವೆ ಪಂಚೇಂದ್ರಿಯಗಳಿಂದ ಅರಿತವನು. ಹಾಗಾದರೆ ದೈವಸಾಕ್ಷಾತ್ಕಾರ ಎಂದರೆ—ಈಗ ತಾನೆ ನಾನು ಹೇಳಿದ ಆ ಯಾವುದೊ ಒಂದು ಶಕ್ತಿ ಇದೆಯಲ್ಲ ಅದನ್ನು ಕಣ್ಣಾರೆ / ಮನಸಾರೆ ಕಾಣುವುದು, ಅರಿಯುವುದು ಎಂದು. ಅದು ಎಲ್ಲೆಲ್ಲಿಯೂ, ಎಲ್ಲದರಲ್ಲೂ ಇದೆ. ಅದು ಇಲ್ಲದ್ದು ಯಾವುದೂ ಇಲ್ಲ. ಸಕಲ ಚರಾಚರ, ಸಜೀವ ನಿರ್ಜೀವ ವಸ್ತುಗಳ ಉಪಾದಾನ / ಧಾತುವೇ ಅದು. ಅದು ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣುವಂತೆ ನಿಸರ್ಗದಲ್ಲಿದೆ. ಅದನ್ನು ಗೀತೆಯಲ್ಲಿ ಭಗವಂತನೇ 'ವಿಭೂತಿ ಯೋಗ'ದಲ್ಲಿ ಸ್ಪಷ್ಟಪಡಿಸಿದ್ದಾನೆ. 'ನನ್ನ ವಿಭೂತಿಗಳಿಗೆ ಕೊನೆ ಎಂಬುದೇ ಇಲ್ಲ. ಆದರೂ ಪ್ರಮುಖವಾದವುಗಳನ್ನು ಹೇಳು ತ್ತೇನೆ ಕೇಳು' ಎಂದು ಹೇಳುತ್ತಾನೆ. ಅವನು ಕಣ್ಣೆದುರಿಗೆ ಇದ್ದಾನೆ. ಕಣ್ಣು ಬಿಟ್ಟು ನೋಡಬೇಕಷ್ಟೆ. ಅದನ್ನು ನೋಡಲು ತಿಣುಕಾಟ ಬೇಕಾಗಿಲ್ಲ. ಕಣ್ಮುಚ್ಚಿ ಕುಳಿತರೆ ಮಾತ್ರ ಕಾಣುವನೆ? ಇಷ್ಟೊಂದು ಸುಲಭವಾಗಿ ಪ್ರತ್ಯಕ್ಷವಾಗಿರುವ ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ಯಾವ ಉಪಾಯ?

"ಸಾಕ್ಷಾತ್ಕಾರಕ್ಕೆ ಸಾಧನೆ ಅಗತ್ಯ ಎನ್ನುತ್ತಾರೆ. ಸಾಧನೆ ಎಂದರೇನು? ಅಂಗಸಾಧನೆ ನಿಮಗೆಲ್ಲ ಗೊತ್ತು. ನರನಾಡಿ, ಸ್ನಾಯು ಮಾಂಸಖಂಡಗಳನ್ನು ಬೆಳೆಸಿ, ದೇಹವನ್ನು ತನಗೆ ಬೇಕಾದಂತೆ ಅಂಕೆಯಲ್ಲಿಟ್ಟುಕೊಳ್ಳುವುದು ಅಂಗಸಾಧನೆ. ಹಾಗೆಯೇ ಮನಸ್ಸಿನ ಆಸೆ, ಆಕಾಂಕ್ಷೆ, ಈರ್ಷ್ಯೆ, ರೋಷ, ಮತ್ಸರ, ಮದ, ಲೋಭ, ಮೋಹಗಳನ್ನು ಅಂಕೆಯಲ್ಲಿಟ್ಟುಕೊಳ್ಳುವ ಸಾಧನೆಯನ್ನು ಆತ್ಮ ಸಾಧನೆ ಎಂದಿಟ್ಟುಕೊಳ್ಳಬಹುದು. ಅಂಕೆತಪ್ಪಿ ದಿಕ್ಕು ದಿಕ್ಕುಗಳಿಗೂ ನುಗ್ಗಿಹೋಗುತ್ತಿರುವ ಈ ಚಂಚಲಮನಸ್ಸನ್ನು ಅಂಕೆಯಲ್ಲಿಟ್ಟು ಕೊಳ್ಳದಿದ್ದರೆ ಎಲ್ಲೆಲ್ಲಿಯೂ ಪ್ರತ್ಯಕ್ಷ ಕಣ್‌ಮುಂದೆಯೇ ಇರುವ ಅದನ್ನು ನಾವು ಬರಿಗಣ್ಣಿನಿಂದ ನೋಡಿದರೂ ಕಂಡಂತೆಯೇ ಅಲ್ಲ. ಹಾಗಾದರೆ ಹೇಗೆ ಮಾಡಿದರೆ ಮನಸ್ಸಿಗೆ ಲಗಾಮು ಹಾಕಿ ಕಾಣುವುದೆಲ್ಲ ಅದೇ ಎಂದು ಅರಿಯಬಹುದು?

"ಎಲ್ಲ ದಾರ್ಶನಿಕರೂ ಸಂತರೂ ಋಷಿಗಳೂ ಗುರುಗಳೂ ಹೇಳುವ ಒಂದು ಉಪಾಯ—ಸರಳ, ಸುಲಭವಾದ ಉಪಾಯ ಎಂದರೆ ಭಕ್ತಿಯಿಂದ ಅವನನ್ನು/ ಅದನ್ನು ನೆನೆಯುವುದು, ಧ್ಯಾನಿಸು ವುದು ಮತ್ತು ಪೂಜಿಸುವುದು. ಇದು ಎಲ್ಲ ಧರ್ಮಗಳಲ್ಲೂ ಹೇಳುವ ಮಾತು. ವೀರಶೈವ ಧರ್ಮದಲ್ಲೂ ಅದನ್ನೇ ಹೇಳಿದೆ. ಹಾಗಾದರೆ ಭಕ್ತಿ ಎಂದರೇನು? 'ನಾರದಭಕ್ತಿಸೂತ್ರ' ದಲ್ಲಿ—ಭಕ್ತಿ ಎಂದರೆ ಪ್ರೇಮ ಎಂದು ಒಂದೇ ಮಾತಿನಲ್ಲಿ ವ್ಯಾಖ್ಯಾನಿಸಲಾಗಿದೆ. ಅಂದಮೇಲೆ ದೈವಭಕ್ತಿ, ಎಂದರೆ ದೈವಪ್ರೇಮ ಎಂದಾಯಿತು. ಹಾಗಾದರೆ ಈ ಸೃಷ್ಟಿಯನ್ನು, ಕ್ರಿಮಿಕೀಟಗಳಿಂದ ಹಿಡಿದು ಜೀವ ರಾಶಿಗಳಲ್ಲೆಲ್ಲಾ ಶ್ರೇಷ್ಠ, ಮುಕುಟಮಣಿ ಎಂದು ಕರೆಯಲಾದ ಮಾನವನವರೆಗೆ ಎಲ್ಲದನ್ನೂ ಪ್ರೀತಿಸುವುದೆ ಭಕ್ತಿ. ಇರುವೆಗೆ ಸಕ್ಕರೆ ಹಾಕುವಾಗ ಅವುಗಳ ಮೇಲಿನ ಪ್ರೀತಿಗಾಗಿ ಎಂದು ಅವರು ನಂಬಿದ್ದರೆ ಅದು ಭಕ್ತಿ. ಹಾಗೆ ಇರುವೆಯನ್ನೇ ಪ್ರೀತಿಸುವ ದೈವ ಭಕ್ತ ಮನುಷ್ಯನನ್ನು ಯಾಕೆ ಪ್ರೀತಿಸುವುದಿಲ್ಲ? ಯಾಕೆ ದ್ವೇಷಿಸು ತ್ತಾನೆ? ಮನುಷ್ಯ ಉಪವಾಸ ಇದ್ದಾಗ ಅವನಿಗೆ ಒಂದಗಳು ಅನ್ನ ಕೊಡದವನು, ರೋಗಿಯನ್ನು ಆರೈಕೆ ಮಾಡದವನು ಕಣ್ಣಿಗೆ ಕಾಣ ದಿರುವ ಯಾವುದೋ ಶಕ್ತಿಯನ್ನು ಪ್ರೀತಿಸುವುದು ಅಸಾಧ್ಯ.

"ಶರಣಧರ್ಮ ಅಥವಾ ಶಿವಯೋಗ ಸರಳಮಾತಿನಲ್ಲಿ: **'ಸಕಲ ಜೀವಾತ್ಮರಿಗೆ ಲೇಸನೇ ಬಯಸು, ದಯೆಯೇ ಧರ್ಮದ ಮೂಲವಯ್ಯ'** ಎನ್ನುತ್ತದೆ. ಇದು ಭಕ್ತಿಯೋಗದ ಒಂದು ಮುಖ. ಹಾಗೆ ಸಕಲ ಜೀವಾತ್ಮರಿಗೂ ಲೇಸನೆ ಬಯಸುವ ದಯಾದೃಷ್ಟಿ, ದಯಾ ಬುದ್ಧಿ ಹೇಗೆ ಉಂಟಾದೀತು, ಎಲ್ಲರನ್ನೂ ಪ್ರೀತಿಸುವ ಭಕ್ತಿಭಾವ ಹೇಗೆ ಬಂದೀತು? ಯಾರನ್ನು ನಾವು ಪ್ರೀತಿಸಬೇಕೊ ಅವರೂ ನಾವೂ ಒಂದೇ ಎಂಬ ಅರಿವು ಉಂಟಾಗಬೇಕು, ಇತರ ರಲ್ಲಿರುವ ಯಾವುದೋ ಒಂದು ನಮ್ಮಲ್ಲಿಯೂ ಇದೆ. ಇತರರನ್ನು ಪ್ರೀತಿಸುವುದು ಎಂದರೆ ನಮ್ಮನ್ನು ನಾವೇ ಪ್ರೀತಿಸುವುದು ಎಂದೇ ಅರ್ಥ. ನಮ್ಮನ್ನು, ನಮ್ಮವರನ್ನು ಪ್ರೀತಿಸುವುದು ಎಲ್ಲರ ಅನುಭವ. ಇತರರು ಎಂದು ಕಾಣುವವರೂ ನಮ್ಮವರೇ. ಸಕಲ ಜೀವಾತ್ಮ ರಲ್ಲಿ ಕೂಡಲ ಸಂಗಮನನ್ನೇ ಕಾಣುವ ಶರಣದೃಷ್ಟಿ ಮೂಡಿದಾಗ, 'ನಾನು' 'ಇತರರು' ಎಂಬ ಭೇದ ಉಳಿಯುವುದಿಲ್ಲ. ಆದ್ದರಿಂದ ದೈವಭಕ್ತಿ ಎಂದರೆ ಸರ್ವರನ್ನೂ ಪ್ರೀತಿಸುವುದು. ಅದರಲ್ಲೂ ಸಜೀವ ನಡೆದಾಡುವ ದೇವರಾದ ಮಾನವರನ್ನು ಪ್ರೀತಿಸುವುದೇ ದೈವಪೂಜೆ. ಈ ಮಾತನ್ನೇ ಸ್ವಾಮಿ ವಿವೇಕಾನಂದರು ಸಹಸ್ರಾರು ವೇದಿಕೆಗಳಿಂದ ಸಾರಿದರು, ಸಹಸ್ರಾರು ಪುಟಗಳಲ್ಲಿ ಬರೆದರು.

"ಇಂಥ ಸಮದೃಷ್ಟಿಯನ್ನು, ಪ್ರೇಮವನ್ನು ಬೆಳೆಸಿಕೊಳ್ಳುವು ದೆಂತು? ಅದಕ್ಕೆ ಶರಣರು ಕಾಯಕವೆ ಉತ್ಕೃಷ್ಟ ಮಾರ್ಗ ಎಂದಿ ದ್ದಾರೆ. ಕ್ಷಣಮಾತ್ರವೂ—ಕಣ್ಣಿನ ರೆಪ್ಪೆ ಬಡಿಯುವಷ್ಟು ಕಾಲ ವಾದರೂ—ಒಂದಲ್ಲ ಒಂದು ಕರ್ಮ ಮಾಡದೆ ಇರಲಿಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಮಾಡಲೇಬೇಕಾದ ಕೆಲಸವನ್ನು ಸರ್ವಸಮರ್ಪಣ ಭಾವದಿಂದ, ಮಾಡುವುದೆಲ್ಲ ಅವನ ಸೇವೆ ಎಂದು ಮಾಡುವುದೆ ಕಾಯಕ. ಅದು ಕಾಯಕಷ್ಟದ ದುಡಿಮೆ ಎಂದು ಮಾಡುವ, ಬಿಡ ಲಾರದ ಬಾಧಕ ಎಂದು ಮಾಡುವ ಶ್ರಮವಲ್ಲ. ಅದು ಪ್ರೀತಿಯಿಂದ